Akashvani : Bengaluru
National Bulletin In Kannada
02.11.2025 : 7.35am
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*******

<><*<><>*><>

ಮುಖ್ಯಾಂಶಗಳು

೧. ಬಿಹಾರ್ ವಿಧಾನಸಭಾ ಚುನಾವಣೆಗೆ ಪ್ರಚಾರ ಬಿರುಸು; ಇಂದು ಸತತ ಎರಡು ರ್‍ಯಾಲಿಗಳನ್ನುದ್ದೇಶಿಸಿ ಪ್ರಧಾನಿ ಭಾಷಣ

೨. ಮೂರು ದಿನಗಳ ರಾಷ್ಟ್ರಪತಿ ದ್ರೌಪದಿ ಮುರ್ಮು ಉತ್ತರಾಖಂಡ ಪ್ರವಾಸ; ಹರಿದ್ವಾರದಲ್ಲಿಂದು ಪತಂಜಲಿ ವಿಶ್ವವಿದ್ಯಾಲಯದ ೨ನೇ ಘಟಿಕೋತ್ಸವದಲ್ಲಿ ಭಾಗಿ

೩. ದೇಶದ ಅತ್ಯಂತ ತೂಕದ ಸಂವಹನ ಉಪಗ್ರಹ ಸಿಎಂಎಸ್-೦೩ ಉಡಾವಣೆಗೆ ಇಸ್ರೋ ಇಂದು ಸಜ್ಜು

೪. ದೇಶಾದ್ಯಂತ ಇಂದಿನಿಂದ ೬೭ನೇ ಆವೃತ್ತಿಯ ಆಕಾಶವಾಣಿ ಸಂಗೀತ ಸಮ್ಮೇಳನ ಆಯೋಜನೆ;

೫. ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಫೈನಲ್; ಟ್ರೋಫಿಗಾಗಿ ಇಂದು ಭಾರತ-ದಕ್ಷಿಣ ಆಫ್ರಿಕಾ ಸೆಣಸು

****************

ಬಿಹಾರ್ ವಿಧಾನಸಭಾ ಚುನಾವಣೆಯ ಪ್ರಚಾರ ಅಂತಿಮ ಹಂತಕ್ಕೆ ತಲುಪುತ್ತಿದ್ದು, ವಿವಿಧ ರಾಜಕೀಯ ಪಕ್ಷಗಳ ಪ್ರಮುಖ ನಾಯಕರು ಹಾಗೂ ತಾರಾ ಪ್ರಚಾರಕರು ರಾಜ್ಯಾದ್ಯಂತ ಸಂಚರಿಸಿ ರ್‍ಯಾಲಿಗಳನ್ನು ನಡೆಸುತ್ತಿದ್ದಾರೆ. ಬಿಹಾರಕ್ಕಾಗಿ ಹೋರಾಟ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಹಿರಿಯ ಬಿಜೆಪಿ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಚುನಾವಣಾ ಪ್ರಚಾರಕ್ಕಾಗಿ ಬಿಹಾರಕ್ಕೆ ಭೇಟಿ ನೀಡಲಿದ್ದಾರೆ. ಪ್ರಧಾನಿ, ಎರಡು ಸತತ

ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇಂದು ಮಧ್ಯಾಹ್ನ ಅರ್‍ರಾದಲ್ಲಿ, ಸಂಜೆ ನವಾಡದಲ್ಲಿ ರಾಲಿಯಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದು, ಬಳಿಕ ಪಾಟ್ನಾಗೆ ತೆರಳಲಿದ್ದಾರೆ. ಪ್ರಧಾನಿಯವರು ರಾಷ್ಟ್ರಕವಿ ರಾಮಧಾರಿ ಸಿಂಗ್ ದಿನಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಿದ್ದು, ಎನ್‌ಡಿಎ ಅಭ್ಯರ್ಥಿಗಳನ್ನು ಬೆಂಬಲಿಸಿ ಪಾಟ್ನಾದಲ್ಲಿ ನಡೆಯುವ ರೋಡ್‌ಶೋದಲ್ಲಿ ಭಾಗವಹಿಸಲಿದ್ದಾರೆ. ಅವರು ಪಾಟ್ನಾ ನಗರದ ತಖ್ತ್ ಹರಿಮಂದಿರ್ ಸಾಹಿಬ್ ಗುರುದ್ವಾರಕ್ಕೂ ಭೇಟಿ ನೀಡಲಿದ್ದಾರೆ. ಬಿಜೆಪಿಯ ಹಿರಿಯ ನಾಯಕ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಜಫರ್‌ಪುರ ಮತ್ತು ವೈಶಾಲಿಯಲ್ಲಿ ರ್‍ಯಾಲಿಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬೇಗುಸರಾಯ್ ಮತ್ತು ಖಗಾರಿಯಾದಲ್ಲಿ ಎರಡು ರ್‍ಯಾಲಿಗಳನ್ನು ನಡೆಸಲಿದ್ದಾರೆ, ಮಹಾಘಟಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಮುಂಗೇರ್, ಪಾಟ್ನಾ, ವೈಶಾಲಿ ಮತ್ತು ಸರನ್‌ಗಳಲ್ಲಿ ಹಲವು ಚುನಾವಣಾ ರ್‍ಯಾಲಿಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ.

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಮೂರು ದಿನಗಳ ಕಾಲ ಉತ್ತರಾಖಂಡಕ್ಕೆ ಭೇಟಿ ನೀಡಲಿದ್ದಾರೆ. ರಾಷ್ಟ್ರಪತಿಗಳು ಇಂದು ಹರಿದ್ವಾರದಲ್ಲಿ ಪತಂಜಲಿ ವಿಶ್ವವಿದ್ಯಾಲಯದ ೨ನೇ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಾಳೆ ರಾಷ್ಟ್ರಪತಿ, ಉತ್ತರಾಖಂಡ ರಾಜ್ಯ ರಚನೆಯ ಬೆಳ್ಳಿ ಮಹೋತ್ಸವದಂದು ಡೆಹ್ರಾಡೂನ್‌ನಲ್ಲಿ ಉತ್ತರಾಖಂಡ ವಿಧಾನಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ನೈನಿತಾಲ್‌ನಲ್ಲಿ ರಾಜಭವನದ ಸ್ಥಾಪನೆಯ ೧೨೫ ವರ್ಷಗಳನ್ನು ಸ್ಮರಿಸುವ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ. ನಾಡಿದ್ದು, ರಾಷ್ಟ್ರಪತಿಗಳು ಕೈಂಚಿ ಧಾಮ್‌ನಲ್ಲಿರುವ ನೀಮ್ ಕರೋಲಿ ಬಾಬಾ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ನಂತರ, ಅವರು ನೈನಿತಾಲ್‌ನಲ್ಲಿರುವ ಕುಮೌನ್ ವಿಶ್ವವಿದ್ಯಾಲಯದ ೨೦ನೇ ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ.

***************

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ, ಇಂದು ದೇಶದ ಅತ್ಯಂತ ಭಾರವಾದ ಸಂವಹನ ಉಪಗ್ರಹ ಸಿಎಂಎಸ್-೦೩ ಅನ್ನು ಉಡಾವಣೆ ಮಾಡಲು ಸಜ್ಜಾಗಿದೆ. ಸುಮಾರು ೪

ಸಾವಿರದ ೪೦೦ ಕೆ.ಜಿ. ತೂಕದ ಸಿಎಂಎಸ್ -೦೩ ಬಹು-ಬ್ಯಾಂಡ್ ಮಿಲಿಟರಿ ಸಂವಹನ ಉಪಗ್ರಹವಾಗಿದ್ದು, ಇದನ್ನು ಜಿ.ಎಸ್.ಎ.ಟಿ-೭ಆರ್ ಎಂದೂ ಕರೆಯುತ್ತಾರೆ. ದೇಶದ ಅತ್ಯಂತ ಶಕ್ತಿಶಾಲಿ ರಾಕೆಟ್ ಆಗಿರುವ ಉಡಾವಣಾ ವಾಹನ ಮಾರ್ಕ್-೩ ರಲ್ಲಿ ಈ ಉಪಗ್ರಹವನ್ನು ಉಡಾವಣೆ ಮಾಡಲಾಗುವುದು. ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಇಂದು ಸಂಜೆ ಉಡಾವಣೆ ಆಗಲಿದೆ.

***************

ಸಂಸ್ಕೃತಿ ಸಚಿವಾಲಯದ ಸಹಯೋಗದೊಂದಿಗೆ ಪ್ರಸಾರ ಭಾರತಿ ವತಿಯಿಂದ ಇಂದಿನಿಂದ ಇದೇ ೨೯ ರವರೆಗೆ ದೇಶಾದ್ಯಂತ ೨೪ ಕೇಂದ್ರಗಳಲ್ಲಿ ೬೭ ನೇ ಆವೃತ್ತಿಯ ಆಕಾಶವಾಣಿ ಸಂಗೀತ ಸಮ್ಮೇಳನವನ್ನು ಆಯೋಜಿಸಲಾಗಿದೆ. ೧೯೫೪ರಲ್ಲಿ ಪ್ರಾರಂಭವಾದಾಗಿನಿಂದ, ಆಕಾಶವಾಣಿ ಸಂಗೀತ ಸಮ್ಮೇಳನ ಭಾರತದ ಪ್ರಮುಖ ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ ಒಂದಾಗಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಹಿಂದೂಸ್ತಾನಿ ಶಾಸ್ತ್ರೀಯ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಮತ್ತು ಜಾನಪದ ಸಂಗೀತದ ರಸದೌತಣವನ್ನು ದೇಶಾದ್ಯಂತ ಸಂಗೀತಾಸಕ್ತರಿಗೆ ಉಣಬಡಿಸಲು ವೇದಿಕೆ ಸಜ್ಜುಗೊಳಿಸಲಾಗಿವೆ. ಭಾರತದ ಶ್ರೀಮಂತ ಸಂಗೀತ ಪರಂಪರೆಯನ್ನು ಸಂರಕ್ಷಿಸುವ, ಉತ್ತೇಜಿಸುವ ಮತ್ತು ಜನಪ್ರಿಯಗೊಳಿಸುವಲ್ಲಿ ಈ ಸಮ್ಮೇಳನ ಪ್ರಮುಖ ಪಾತ್ರ ವಹಿಸಿದೆ. ಸಮ್ಮೇಳನದ ವಿವರ ನೀಡಿರುವ ಪ್ರಸಾರ ಭಾರತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಗೌರವ್ ದ್ವಿವೇದ್, ಕೊವಿಡ್-೧೯ ಸಾಂಕ್ರಾಮಿಕ ರೋಗದಿಂದಾಗಿ ಸ್ವಲ್ಪ ಸಮಯದ ಅಡಚಣೆಯ ನಂತರ, ಈ ವರ್ಷ ಈ ಭವ್ಯ ಉತ್ಸವವು ಹೊಸ ಹುರುಪಿನಿಂದ ಮರಳುತ್ತದೆ ಎಂದು ಹೇಳಿದ್ದಾರೆ. ೨೦೨೫ ರ ಆವೃತ್ತಿಯು ಪ್ರತಿ ಸ್ಥಳದಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಅಥವಾ ಜಾನಪದ ಸಂಗೀತ ಸೇರಿದಂತೆ ಎರಡು ಸಂಗೀತ ಕಛೇರಿಗಳನ್ನು ಒಳಗೊಂಡಿರುತ್ತದೆ. ಪಣಜಿ ಮತ್ತು ಶಿಲ್ಲಾಂಗ್‌ನಲ್ಲಿ ಭಾರತದ ಪ್ರಾದೇಶಿಕ ಸಂಗೀತ ವೈವಿಧ್ಯತೆಯನ್ನು ಪ್ರತಿಬಿಂಬಿಸಲು ಪಾಶ್ಚಿಮಾತ್ಯ ಶಾಸ್ತ್ರೀಯ ಪ್ರಸ್ತುತಿಗಳನ್ನು ಆಯೋಜಿಸಲಾಗುತ್ತಿದೆ.

***************

ಬಹ್ರೇನ್‌ನ ವಿದೇಶಾಂಗ ಸಚಿವ ಅಬ್ದುಲ ಲತೀಫ್ ಬಿನ್ ರಶೀದ್ ಅಲ್ಜಯಾನಿ ಎರಡು ದಿನಗಳ ಭಾರತ ಭೇಟಿಗಾಗಿ ಇಂದು ನವದೆಹಲಿಗೆ ಆಗಮಿಸಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ, ಬಹ್ರೇನ್ ವಿದೇಶಾಂಗ ಸಚಿವರು ವಿದೇಶಾಂಗ ಸಚಿವ ಎಸ್ ಜೈಶಂಕರ್ ಅವರನ್ನು ಭೇಟಿ ಮಾಡಲಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಡಾ. ಜೈಶಂಕರ್ ಅವರು ಬಹ್ರೇನ್‌ಗೆ ಭೇಟಿ ನೀಡಿದ ನಂತರ ಅಬ್ದುಲ್ಲತೀಫ್ ಬಿನ್ ರಶೀದ್ ಅಲ್ಜಯಾನಿ ಅವರ ಭೇಟಿ ಇದಾಗಿದೆ. ಕಳೆದ ವರ್ಷದ ಡಾ. ಜೈಶಂಕರ್ ಭೇಟಿಯ ಸಮಯದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರದ ವ್ಯಾಪ್ತಿಯನ್ನು ವಿಸ್ತರಿಸಲು ಹಾಗೂ ಕಾನ್ಸುಲರ್ ವಿಷಯಗಳಲ್ಲಿ ಸಹಕಾರವನ್ನು ಆಳಗೊಳಿಸಲು ಎರಡೂ ಕಡೆಯವರು ಒಮ್ಮತ ವ್ಯಕ್ತಪಡಿಸಿದ್ದರು. ಸೈಬರ್ ಭದ್ರತೆ ಸೇರಿದಂತೆ ಭದ್ರತಾ ಸಹಕಾರದ ಕ್ಷೇತ್ರದಲ್ಲಿ ಸಹಕಾರವನ್ನು ಸಾಂಸ್ಥಿಕಗೊಳಿಸುವಲ್ಲಿ ದ್ವಿಪಕ್ಷೀಯ ಭದ್ರತಾ ಸಂವಾದ ಮತ್ತು ಅಂತಾರಾಷ್ಟ್ರೀಯ ಭಯೋತ್ಪಾದನೆಯನ್ನು ಎದುರಿಸುವ ಕ್ಷೇತ್ರದಲ್ಲಿ ಜಂಟಿ ಸ್ಟೀರಿಂಗ್ ಸಮಿತಿ-ಜೆಎಸ್‌ಸಿ ಪ್ರಮುಖ ಕಾರ್ಯವಿಧಾನಗಳಾಗಿವೆ ಎಂದು ಭಾರತ ಸಮ್ಮತಿಸಿತ್ತು.

***************

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವಿಯಾ ನೌಕರರ ದಾಖಲಾತಿ ಯೋಜನೆ ೨೦೨೫ ಕ್ಕೆ ಚಾಲನೆ ನೀಡಿದರು. ನವದೆಹಲಿಯಲ್ಲಿ ನಡೆದ ನೌಕರರ ಭವಿಷ್ಯ ನಿಧಿ ಸಂಸ್ಥೆಯ ೭೩ ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸಚಿವರು ಈ ಯೋಜನೆಯನ್ನು ಪ್ರಾರಂಭಿಸಿದರು. ಈ ಯೋಜನೆಯು ಸ್ವಯಂಪ್ರೇರಿತ ಅನುಸರಣೆಯನ್ನು ಉತ್ತೇಜಿಸುವುದು ಮತ್ತು ಎಲ್ಲಾ ಅರ್ಹ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ. ಈ ಯೋಜನೆಯು ಉದ್ಯೋಗದಾತರಿಗೆ ೨೦೧೭ರ ಜುಲೈ ೧ ಮತ್ತು ೨೦೨೫ ರ ಅಕ್ಟೋಬರ್ ೩೧ ರ ನಡುವೆ ಇಪಿಎಫ್ ವ್ಯಾಪ್ತಿಯಿಂದ ಹೊರಗುಳಿದ ಅರ್ಹ ಉದ್ಯೋಗಿಗಳನ್ನು ಸ್ವಯಂಪ್ರೇರಣೆಯಿಂದ ದಾಖಲಿಸಲು ವಿಶೇಷ ಅನುವು ಮಾಡಿಕೊಡಲಿದೆ. ಈ ಯೋಜನೆಯು ೨೦೨೬ ರ ಏಪ್ರಿಲ್ ೩೦ ರವರೆಗೆ ಆರು ತಿಂಗಳ ಕಾಲ ತೆರೆದಿರಲಿದೆ.

***************

ಲಕ್ನೋ ನಗರವು ತನ್ನ ಶ್ರೀಮಂತ ಮತ್ತು ವೈವಿಧ್ಯಮಯ ಪಾಕಶಾಲೆಯ ಪರಂಪರೆಗಾಗಿ ಯುನೆಸ್ಕೋ ಸೃಜನಶೀಲ ನಗರಗಳ ಪಟ್ಟಿಗೆ ಸೇರ್ಪಡೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಲಕ್ನೋ ಒಂದು ರೋಮಾಂಚಕ ಸಂಸ್ಕೃತಿಗೆ ಸಮಾನಾರ್ಥಕ ಮತ್ತು ನಗರವು ಉತ್ತಮ ಪಾಕಶಾಲೆಯ ಸಂಸ್ಕೃತಿಯನ್ನು ಹೊಂದಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಉಲ್ಲೇಖಿಸಿದ್ದಾರೆ. ಸ್ವಸ್ಥ ನಾರಿ, ಸಶಕ್ತ ಪರಿವಾರ್ ಅಭಿಯಾನವು ಸೃಷ್ಟಿಸಿರುವ ಮೂರು ಗಿನ್ನೆಸ್ ವಿಶ್ವ ದಾಖಲೆಗಳು ಶ್ಲಾಘನೀಯ ಎಂದಿರುವ ಪ್ರಧಾನಿ, ಇಂತಹ ಸಾಮೂಹಿಕ ಚಳುವಳಿಗಳು ಮಹಿಳಾ ಸಬಲೀಕರಣ ಪ್ರಯತ್ನಗಳಿಗೆ ಪ್ರಚೋದನೆಯನ್ನು ನೀಡುತ್ತವೆ ಮತ್ತು ದೇಶದ ನಾರಿ ಶಕ್ತಿಯ ಜೀವನದ ಮೇಲೆ ಪರಿವರ್ತನಾತ್ಮಕ ಪರಿಣಾಮ ಬೀರುತ್ತವೆ ಎಂದು ತಿಳಿಸಿದ್ದಾರೆ. ಸ್ವಸ್ಥ ನಾರಿ, ಸಶಕ್ತ ಪರಿವಾರ್ ಅಭಿಯಾನವು ಬಹು ದಾಖಲೆಗಳನ್ನು ನಿರ್ಮಿಸಿದೆ, ಇದರಲ್ಲಿ ಒಂದೇ ತಿಂಗಳಲ್ಲಿ ಆರೋಗ್ಯ ರಕ್ಷಣಾ ವೇದಿಕೆಗೆ ೩ ಕೋಟಿ ೨೧ ಲಕ್ಷಕ್ಕೂ ಹೆಚ್ಚು ಜನರು ನೋಂದಾಯಿಸಿಕೊಂಡಿರುವುದೂ ಸೇರಿದೆ.

***************

ಇಂದೋರ್‌ನಲ್ಲಿ ನಿನ್ನೆ ಸಂಜೆ ರೌ ಪೊಲೀಸ್ ಠಾಣೆ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಗೋದಾಮುವೊಂದರಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡು ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದು, ಒಬ್ಬರು ಗಾಯಗೊಂಡಿದ್ದಾರೆ. ಇಂದೋರ್ ವಲಯ ೧ ರ ಉಪ ಪೊಲೀಸ್ ಆಯುಕ್ತ ಕೃಷ್ಣ ಲಾಲ್‌ಚಂದಾನಿ, ಮೃತರು ಏಕಾದಶಿ ಪೂಜೆಯನ್ನು ಮಾಡುತ್ತಿದ್ದಾಗ ದೀಪ ಬೆಳಗಿಸುವ ವೇಳೆ ಅವಘಡ ಸಂಭವಿಸಿರಬಹುದು ಎಂದು ಹೇಳಿದ್ದಾರೆ.

***************